ಓ ಎಸ್ ನಂ. 78/2018
ಡಿ ಡಬ್ಲ್ಯು 1
ದಿನಾಂಕ 29-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಎನ್ ಎಸ್ ವಕೀಲರಿಂದಃ

1 ನೇ ಪ್ರತಿವಾದಿ ತಿಮ್ಮಪ್ಪ ನನ್ನ ತಂದೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ನನ್ನ ಹಿರಿಯ ಸಹೋದರಿಯರು ಎಂದರೆ ಸರಿ. ವಾದಿಯ ಸ್ವಾಭಾವಿಕ ಪೋಷಕರಾದ ಸಾವಿತ್ರಿ ನನ್ನ ಹೆಂಡತಿ ಎಂದರೆ ಸರಿ. ಕುಮಾರಿ ಮೈತ್ರಿ ಮತ್ತು ಸಾವಿತ್ರಿ ನನ್ನಿಂದ ದೂರ ಇದ್ದಾರೆ ಎಂದರೆ ಸಾಕ್ಷಿ ಮೈತ್ರಿ ನನ್ನ ಮಗಳಲ್ಲ ಆದರೆ ಸಾವಿತ್ರಿರವರು ನನ್ನಿಂದ ಪ್ರತ್ಯೇಕ ಇದ್ದಾರೆ ಎಂದು ನುಡಿಯುತ್ತಾರೆ. ಸಾವಿತ್ರಿರವರು ನನ್ನ ವಿರುದ್ಧ ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದು ಆ ಪ್ರಕರಣ ವಿಚಾರಣೆಯಲ್ಲಿದೆ ಹಾಗೂ ನನ್ನ ವಿರುದ್ಧ ಸಲ್ಲಿಸಿದಂತೆ ವರದಕ್ಷಿಣೆ ಕಿರುಕುಳ ಪ್ರಕರಣ ಸಹ ವಿಚಾರಣಾ ಹಂತದಲ್ಲಿದೆ ಎಂದರೆ ಸರಿ. ಜೀವನಾಂಶ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಸದರಿ ಜೀವನಾಂಶದ ಪ್ರಕರಣ ಎಷ್ಟು ವರ್ಷದಿಂದ ನಡೆಯುತ್ತಿದೆ ಎಂದರೆ ಸಾಕ್ಷಿ ಸುಮಾರು 6-7 ವರ್ಷಗಳಿಂದ ಎಂದು ನುಡಿಯುತ್ತಾರೆ. ಕುಮಾರಿ ಮೈತ್ರಿ ನನ್ನ ಮಗಳಲ್ಲ ಎಂದು ನಾನು ಪ್ರತಿಪಾದಿಸುತ್ತಿದ್ದು ಆ ಬಗ್ಗೆ ಸಕ್ಷಮ ನ್ಯಾಯಾಲಯದಲ್ಲಿ

ಘೋಷಣಾತ್ಮಕ ಪರಿಹಾರ ಪಡೆದಿರುತ್ತೇನಾ ಎಂದರೆ ಸಾಕ್ಷಿ ಈ ದಾವೆಯಲ್ಲಿಯೇ ಕೇಳಿದ್ದೇನೆ ಎಂದು ನುಡಿಯುತ್ತಾರೆ. ಕುಮಾರಿ ಮೈತ್ರಿ ಪ್ರಸ್ತುತ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಜೀವನಾಂಶಕ್ಕಾಗಿ ಕುಮಾರಿ ಮೈತ್ರಿರವರಿಗಾಗಲಿ ಅಥವಾ ಸಾವಿತ್ರಿರವರಿಗಾಗಲಿ ನಾನು ಇಲ್ಲಿಯವರೆಗೂ ಯಾವುದೇ ಹಣ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾವಿತ್ರಿರವರಿಗೆ ನನ್ನ ಜತೆ ಬಂದು ಸಂಸಾರ ಮಾಡುವಂತೆ ಕೇಳಿಕೊಂಡಿದ್ದೆ ಎಂದು ನುಡಿದಿರುತ್ತಾರೆ. ಸಾವಿತ್ರಿರವರು ನನ್ನ ಜತೆ ಬಂದು ಜೀವನ ನಡೆಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ ಮತ್ತು ವಕೀಲರ ಮೂಲಕ ಸಾವಿತ್ರಿರವರಿಗೆ ನೋಟೀಸನ್ನು ಕೊಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಪೊಲೀಸರಿಗೆ ದೂರು ನೀಡಿದ ಬಗ್ಗೆ ಮತ್ತು ನೋಟೀಸು ನೀಡಿದ ಬಗ್ಗೆ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಜೀವನಾಂಶ ಪ್ರಕರಣದಲ್ಲಿ ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಜೀವನಾಂಶ ಪ್ರಕರಣದಲ್ಲಿ ನಾನು ಅಂತಹ ದಾಖಲೆಗಳನ್ನು ಹಾಜರುಪಡಿಸಿದ್ದರೆ ಅವುಗಳನ್ನು ಪಡೆದು ಈ ನ್ಯಾಯಾಲಯದಲ್ಲಿ ಹಾಜರುಪಡಿಸಬಹುದು

ಎಂದರೆ ಸಾಕ್ಷಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆ ದಾಖಲಾತಿ ಇದೆ, ನನಗೆ ಸಿಗುವುದಿಲ್ಲ ಎಂದು ನುಡಿಯುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನ್ನ ಮತ್ತು ಸಾವಿತ್ರಿರವರ ನಡುವೆ ಯಾವ ಪ್ರಕರಣ ವಿಚಾರಣೆಯಲ್ಲಿದೆ ಎಂದರೆ ಸಾಕ್ಷಿ ಸಾವಿತ್ರಿರವರು ಸಲ್ಲಿಸಿರುವ ವರದಕ್ಷಿಣೆ ಕಿರುಕುಳ ಪ್ರಕರಣವನ್ನು ರದ್ದು ಗೊಳಿಸುವಂತೆ ಕೇಳಿ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಸಂಖ್ಯೆ ತಿಳಿದಿದೆಯಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ದಾಖಲೆಗಳನ್ನು ಪಡೆದು ಈ ನ್ಯಾಯಾಲಯದಲ್ಲಿ ಹಾಜರುಪಡಿಸಬಹುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಾನು ಚಿತ್ರರಂಗದಲ್ಲಿ ಏನಾದರೂ ಕೆಲಸ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಾನು ಮದುವೆಗೂ ಮೊದಲು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದು, ಮದುವೆಯ ನಂತರ ಊರಿನಲ್ಲಿ ತಂದೆ ತಾಯಿಯನ್ನು ನೋಡಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸುಶೀಲಮ್ಮ ಎಂದರೆ ನನ್ನ ತಾಯಿ. ವಾದಿ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ನಿಪಿ-1ರ ವಂಶವೃಕ್ಷ ಸರಿ ಇದೆ ಎಂದು ಸಾಕ್ಷಿಗೆ ತೋರಿಸಿ ಕೇಳಲಾಗಿ ಸಾಕ್ಷಿ ಅದನ್ನು ಪರಿಶೀಲಿಸಿ ಸರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರಿಂದ 6ರ

ಪಹಣಿಗಳು ನನ್ನ ತಂದೆಯ ಹೆಸರಿನಲ್ಲಿರುತ್ತವೆ ಎಂದರೆ ಸರಿ. ನಿಪಿ-7 ರಂತೆ ನನ್ನ ತಂದೆ ಹೆಸರಿನಲ್ಲಿ ದಾವಾ ಐಟಂ ನಂ.6 ರ ಸ್ವತ್ತು ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.